ಕರ್ನಾಟಕ ಸರ್ಕಾರ

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಉ ನಿ : ಸುಮಪ : 2016-17 ದಿನಾಂಕ: 25-10-2016

# ಮಾಧ್ಯಮ ಪ್ರತಿನಿಧಿಗಳ ಗಮನಕ್ಕೆ

ನವೆಂಬರ್ 21 ರಿಂದ ಬೆಳಗಾವಿಯಲ್ಲಿ ನಡೆಯಲಿರುವ ವಿಧಾನಮಂಡಲದ ಅಧಿವೇಶನ ವರದಿಗಾಗಿ ಬೆಂಗಳೂರಿನಿಂದ ತೆರಳುವ ಮಾಧ್ಯಮ ಪ್ರತಿನಿಧಿಗಳಿಗೆ ಪಾಸ್ ಹಾಗೂ ಇತರೆ ವ್ಯವಸ್ಥೆಗಾಗಿ ವಿವಿಧ ಮಾಧ್ಯಮ ಸಂಸ್ಥೆಗಳಿಗೆ ಸಂಖ್ಯೆ ನಿಗದಿಪಡಿಸಲಾಗಿದೆ. ಅದರನ್ವಯ ಆಯಾ ಮಾಧ್ಯಮ ಕಛೇರಿಯಿಂದ ಮಾಧ್ಯಮ ಪ್ರತಿನಿಧಿಗಳ ವಿವರವನ್ನು ಈ ಕೆಳಕಂಡ ನಮೂನೆಯಲ್ಲಿ ಸುದ್ದಿ ಮತ್ತು ಪತ್ರಿಕಾ ಶಾಖೆಗೆ ಅಕ್ಟೋಬರ್ 27 ರೊಳಗೆ ಸಲ್ಲಿಸಬೇಕು.

1) ಮುದ್ರಣ ಮಾಧ್ಯಮ: ರಾಜ್ಯ ಮತ್ತು ರಾಷ್ಟ್ರಮಟ್ಟದ ದಿನಪತ್ರಿಕೆಗಳಿಂದ ಮಾನ್ಯತಾ ಪತ್ರ ಹೊಂದಿರುವ 4 ವರದಿಗಾರರು ಮತ್ತು 1 ಛಾಯಾಗ್ರಾಹಕರಿಗೆ ಅವಕಾಶ.

2) ವಿದ್ಯುನ್ಮಾನ ಮಾಧ್ಯಮ: ರಾಜ್ಯ ಮಟ್ಟದ ಉಪಗ್ರಹ ಆಧಾರಿತ ನ್ಯೂಸ್ ಚಾನೆಲ್‌ಗಳಿಂದ ಮಾನ್ಯತಾ ಪತ್ರ ಹೊಂದಿರುವ 4 ವರದಿಗಾರರು ಮತ್ತು 4 ಕ್ಯಾಮರಾಮನ್‌ಗಳಿಗೆ ಅವಕಾಶ, ರಾಷ್ಟ್ರೀಯ ಮಟ್ಟದ ಉಪಗ್ರಹ ಆಧಾರಿತ ನ್ಯೂಸ್ ಚಾನೆಲ್‌ಗಳಿಂದ 2 ವರದಿಗಾರರು ಮತ್ತು 2 ಕ್ಯಾಮರಾಮನ್‌ಗಳಿಗೆ ಅವಕಾಶ.

3) ಸುದ್ದಿ ಸಂಸ್ಥೆ: ಮಾನ್ಯತಾ ಪತ್ರ ಹೊಂದಿರುವ ಸುದ್ದಿ ಸಂಸ್ಥೆಯ ಇಬ್ಬರು ಪ್ರತಿನಿಧಿಗಳಿಗೆ ಅವಕಾಶ.

4) ಅನ್ಯ ಭಾಷೆಯ ದಿನಪತ್ರಿಕೆಗಳು: ಅನ್ಯ ಭಾಷೆಯ ರಾಷ್ಟ್ರೀಯ ದಿನಪತ್ರಿಕೆಗಳಲ್ಲಿ ಬೆಂಗಳೂರಿನ ಪ್ರತಿನಿಧಿಯಾಗಿ ಕಾರ್ಯ ನಿರ್ವಹಿಸುತ್ತಿರುವ ಮತ್ತು ಮಾನ್ಯತಾ ಪತ್ರ ಹೊಂದಿರುವ 2 ವರದಿಗಾರರಿಗೆ ಅವಕಾಶ.

ಸೂಚನೆ: ಬೆಳಗಾವಿ ಜಿಲ್ಲೆಯನ್ನು ಹೊರತು ಪಡಿಸಿ ಸಮೀಪದ ಜಿಲ್ಲೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಮಾಧ್ಯಮ ಪ್ರತಿನಿಧಿಗಳನ್ನು ನಿಯೋಜಿಸುವುದಿದ್ದಲ್ಲಿ ನಿಗದಿತ ಕೋಟಾದಡಿಯಲ್ಲಿ ಅವರ ಹೆಸರನ್ನು ಈ ಪಟ್ಟಿಯಲ್ಲಿಯೇ ಸೇರಿಸಿ ಕಳುಹಿಸಬೇಕು.

| ಕ್ರ.ಸ. | ಹೆಸರು | ಹುದ್ದೆ | ಮೊಬೈಲ್ ಸಂಖ್ಯೆ | ಈ ಮೇಲ್ ವಿಳಾಸ |
|---|---|---|---|---|
| 1 | | | | |

**ವಿಶೇಷ ಸೂಚನೆ: ಈಗಾಗಲೇ ವಿಧಾನ ಪರಿಷತ್ ಮತ್ತು ವಿಧಾನ ಸಭೆಗೆ ಪ್ರವೇಶ ಪತ್ರ ಪಡೆದಿರುವವರು ಬೆಳಗಾವಿ ವಿಧಾನಮಂಡಲ ಅಧಿವೇಶನಕ್ಕೂ, ಅದೇ ಪ್ರವೇಶ ಪತ್ರವನ್ನು ಬಳಸಬಹುದು. ಪ್ರವೇಶ ಪತ್ರ ಪಡೆಯದಿರುವ ಮಾಧ್ಯಮ ಪ್ರತಿನಿಧಿಗಳು ತಲಾ ಎರಡು ಭಾವಚಿತ್ರವನ್ನು ಸಲ್ಲಿಸಬೇಕು.**

## ಪತ್ರಿಕಾ ಪ್ರಕಟಣೆ

# ಸಚಿವ ಸಂಪುಟ ಸಭೆ

ಬೆಂಗಳೂರು, ಅಕ್ಟೋಬರ್ 25 (ಕರ್ನಾಟಕ ವಾರ್ತೆ)

ರಾಜ್ಯ ಸಚಿವ ಸಂಪುಟದ 2016 ನೇ ಸಾಲಿನ 24 ನೇ ಸಭೆಯನ್ನು ವಿಧಾನ ಸೌಧದ ಮೂರನೇ ಮಹಡಿಯಲ್ಲಿರುವ ಸಚಿವ ಸಂಪುಟ ಸಭಾಮಂದಿರದಲ್ಲಿ ಅಕ್ಟೋಬರ್ 26 ರಂದು ಬೆಳಿಗ್ಗೆ 11.00 ಗಂಟೆಗೆ ಕರೆಯಲಾಗಿದೆ.

## ಬೆಂಗಳೂರಿನ ಜನರ ಉಪಯೋಗಕ್ಕಾಗಿ ಉಕ್ಕಿನ ರಸ್ತೆ

ಬೆಂಗಳೂರು, ಅಕ್ಟೋಬರ್ 25 (ಕರ್ನಾಟಕ ವಾರ್ತೆ)

ಬೆಂಗಳೂರಿನಲ್ಲಿ ಸಂಚಾರಿ ದಟ್ಟಣೆ ಹೆಚ್ಚಾಗಿರುವುದರಿಂದ ಸಾರ್ವಜನಿಕ ಉಪಯೋಗಕ್ಕಾಗಿ ಬಸವೇಶ್ವರ ವೃತ್ತದಿಂದ ಲೀ ಮೆರಿಡಿಯನ್ ಹೋಟೆಲ್ ಹಾಗೂ ಮೇಕ್ರಿ ವೃತ್ತದ ಮುಖಾಂತರ ಹೆಬ್ಬಾಳದ ಮೇಲು ಸೇತುವೆಗೆ ಸಂಪರ್ಕಿಸಲು ಆರು ಪಥದ ಮೇಲ್ಮಟ್ಟದ ಉಕ್ಕಿನ ಮೇಲು ಸೇತುವೆ ರಸ್ತೆ ನಿರ್ಮಾಣದ ಕಾಮಗಾರಿಯನ್ನು ಮಾಡುತ್ತೇವೆ ಎಂದು ಬೆಂಗಳೂರು ನಗರಾಭಿವೃದ್ಧಿ ಸಚಿವ ಕೆ.ಜೆ. ಜಾರ್ಜ್ ತಿಳಿಸಿದರು.

ಇಂದು ವಿಕಾಸ ಸೌಧದಲ್ಲಿ ಪತ್ರಿಕಾಗೋಷ್ಠಿಯನ್ನು ಉದ್ದೇಶಿಸಿ ಮಾತನಾಡಿದ ಅವರು ಈ ಉಕ್ಕಿನ ಸೇತುವೆ ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಹೋಗುವ ಸಾರ್ವಜನಿಕರಿಗೆ ಉಪಯೋಗವಾಗುವುದರ ಜೊತೆಗೆ ಸಮೀಪದ ಇತರ ಬಡಾವಣೆಗಳಿಗೆ ಹಾಗೂ ಲಿಂಕ್ ರಸ್ತೆಗಳಿಗೆ ತೆರಳುವ ಸಾರ್ವಜನಿಕರಿಗೂ ಕೂಡ ತುಂಬಾ ಅನುಕೂಲವಾಗುತ್ತದೆ ಎಂದರು.

ನಮ್ಮ ಸರ್ಕಾರ ಕಡಿಮೆ ಖರ್ಚಿನಲ್ಲಿ ಅಂದರೆ 1791 ಕೋಟಿ ರೂ. ವೆಚ್ಚದಲ್ಲಿ ಹಾಗೂ ಕಡಿಮೆ ಜಾಗ ಅಂದರೆ 3 ಎಕರೆ ಸರ್ಕಾರಿ ಭೂಮಿ ಮತ್ತು 1 ಎಕರೆ ಖಾಸಗಿ ಭೂಮಿಯನ್ನು ವಶಪಡಿಸಿಕೊಂಡು ಹೆಚ್ಚು ಜನರ ಉಪಯೋಗಕ್ಕೆ ಮತ್ತು ಸಂಚಾರ ಸಮಸ್ಯೆಗೆ ಪರಿಹಾರವಾಗಿ ಈ ಉಕ್ಕಿನ ಸೇತುವೆ ನಿರ್ಮಾಣ ಮಾಡಲಾಗುವುದು ಎಂದರು ಅವರು ವಿವರಿಸಿದರು.

ಈ ಉಕ್ಕಿನ ಸೇತುವೆ ನಿರ್ಮಾಣ ಮಾಡುವುದರಿಂದ ತ್ವರಿತವಾಗಿ ಕಾಮಗಾರಿ ಕೈಗೊಳ್ಳಬಹುದು, ಕಾಂಕ್ರಿಟ್‌ನಿಂದ ನಿರ್ಮಿಸಿದ ಕಂಬಗಳು ಮತ್ತು ಮೇಲ್ಮಟ್ಟದ ರಸ್ತೆಯ ರಚನೆ ಸುಮಾರು 70 ರಿಂದ 100 ಟನ್ ತೂಕವುಳ್ಳದ್ದಾಗಿದ್ದರೆ ಉಕ್ಕಿನಿಂದ ನಿರ್ಮಿಸಿದ ಕಂಬಗಳು ಮತ್ತು ರಸ್ತೆಯ ರಚನೆಗಳು 15 ರಿಂದ 20 ಟನ್‌ಗಳಿಗೆ ಸೀಮಿತಗೊಳಿಸಬಹುದು ಎಂದು ಸಚಿವರು ತಿಳಿಸಿದರು.

ಉಕ್ಕಿಗೆ ಮೃದುತ್ವವಿರುವುದರಿಂದ ಪ್ರಕೃತಿ ವಿಕೋಪಕ್ಕೆ (ಭೂಕಂಪ) ಹೆಚ್ಚಿನ ಪ್ರತಿರೋಧ ಶಕ್ತಿಯುಳ್ಳದ್ದಾಗಿರುತ್ತದೆ, ನಿರ್ಮಾಣ ಹಂತದ ಮಾಲಿನ್ಯ ಅಂತ್ಯಂತ ಕಡಿಮೆಯದ್ದಾಗಿರುತ್ತದೆ. ಈ ಕಾಮಗಾರಿಯನ್ನು ಕೈಗೊಳ್ಳುವ ಸಂದರ್ಭದಲ್ಲಿ ಪರಿಸರಕ್ಕೆ ಹಾನಿಯಾಗದಂತೆ ಸುಮಾರು 81,000 ಗಿಡಗಳನ್ನು ನೆಡುವ ಯೋಜನೆ ಹಮ್ಮಿಕೊಂಡಿದ್ದೇವೆ ಎಂದರು.

ಈ ಪತ್ರಿಕಾಗೋಷ್ಠಿಯಲ್ಲಿ ಕೃಷಿ ಸಚಿವ ಕೃಷ್ಣಭೈರೇಗೌಡ, ಶಾಸಕರು ಹಾಗೂ ಹಿರಿಯ ಅಧಿಕಾರಿಗಳು ಉಪಸ್ಥಿತರಿದ್ದರು.

## ವೃತ್ತಿ ಮತ್ತು ವೈಯಕ್ತಿಕ ಜೀವನದಲ್ಲಿ ಸಮತೋಲನ ಕಾಯ್ದುಕೊಳ್ಳಿ –

– ಡಿ.ಜಿ.ಪಿ ಓಂ ಪ್ರಕಾಶ್ ಸಲಹೆ

ಬೆಂಗಳೂರು, ಅಕ್ಟೋಬರ್ 25 (ಕರ್ನಾಟಕ ವಾರ್ತೆ)

ಪೊಲೀಸ್ ಅಧಿಕಾರಿಗಳು ಹಾಗೂ ಸಿಬ್ಬಂದಿ ತಮ್ಮ ವೃತ್ತಿ ಹಾಗೂ ವೈಯಕ್ತಿಕ ಜೀವನ ಇವೆರಡರಲ್ಲೂ ಸಮತೋಲನವನ್ನು ಕಾಯ್ದುಕೊಳ್ಳಬೇಕೆಂದು ಕರ್ನಾಟಕ ಪೊಲೀಸ್ ಮಹಾ ನಿರ್ದೇಶಕ ಓಂ ಪ್ರಕಾಶ್ ಅವರು ಸಲಹೆ ಮಾಡಿದರು.

ಅವರು ಯಲಹಂಕದ ಪೊಲೀಸ್ ವಾಹನ ಮತ್ತು ಸಂರಕ್ಷಣಾ ಶಾಲೆಯಲ್ಲಿ ಹಮ್ಮಿಕೊಳ್ಳಲಾಗಿದ್ದ 1 ನೇ ತಂಡದ ಸಿವಿಲ್ ಪೊಲಿಸ್ ಕಾನ್ಸ್‌ಟೇಬಲ್‌ಗಳ ನಿರ್ಗಮನ ಪಥಸಂಚಲನದ ಗೌರವ ವಂದನೆ ಸ್ವೀಕರಿಸಿ ಮಾತನಾಡಿದರು.

ಪೊಲೀಸರು ಇಂದು ಒತ್ತಡದಿಂದ ಜೀವನ ನಡೆಸುತ್ತಿದ್ದಾರೆ. ಕೆಲವರಿಗೆ ಆಪ್ತ ಸಮಾಲೋಚನೆಯ ಅಗತ್ಯವಿದ್ದು, ಇದನ್ನು ನಡೆಸಲು ಸರ್ಕಾರಕ್ಕೆ ಪ್ರಸ್ತಾವನೆ ಕಳುಹಿಸಲಾಗಿದೆ. ನಾಗರೀಕರು ಪೊಲೀಸ್ ಠಾಣೆಗೆ ಬಂದಾಗ ಪ್ರಥಮ ಮಾಹಿತಿ ವರದಿಯನ್ನು ಪೊಲೀಸರು ದಾಖಲಿಸಿ ಶೀಘ್ರವೇ ಪ್ರಕರಣದ ಇತ್ಯರ್ಥಕ್ಕೆ ಶ್ರಮಿಸಬೇಕು. ಯಾವುದೇ ಬಾಹ್ಯ ಒತ್ತಡಕ್ಕೆ ಮಣಿಯದೆ ಪ್ರಾಮಾಣಿಕವಾಗಿ ಸೇವೆ ಸಲ್ಲಿಸಬೇಕೆಂದರು.

ಜನವರಿ 2016 ರಿಂದ ಇಲ್ಲಿಯವರೆಗೆ ಸುಮಾರು 9 ತಿಂಗಳುಗಳ ಕಾಲ 92 ಪ್ರಶಿಕ್ಷಣಾರ್ಥಿಗಳಿಗೆ ಪೊಲೀಸ್ ಬುನಾದಿ ತರಬೇತಿಯನ್ನು ನೀಡಲಾಗಿದೆ. ತರಬೇತಿ ಪಡೆದ ಪ್ರಥಮ ತಂಡ ಇದಾಗಿದ್ದು, ಇವರಲ್ಲಿ ಸೇವೆಗೆ ಸೇರ್ಪಡೆಯಾದ ಮಾಜಿ ಸೈನಿಕರು ಸಹ ಸೇರಿದ್ದಾರೆ. ಇಲ್ಲಿ ವೃತ್ತಿಗೆ ಸಂಬಂಧಿಸಿದ ಎಲ್ಲಾ ರೀತಿಯ ತರಬೇತಿ ನೀಡಲಾಗಿದೆ ಎಂದರು.

ಪೊಲೀಸ್ ಕಾನ್ಸ್‌ಟೇಬಲ್‌ಗಳಿಂದ ಪಥಸಂಚಲನ, ಬ್ಯಾಂಡ್ ನಿರ್ವಹಣೆ ಜನರ ಗಮನ ಸೆಳೆಯಿತು. ತರಬೇತಿಯಲ್ಲಿ ಉತ್ತಮ ಪ್ರದರ್ಶನ ತೋರಿದ ಹಲವರಿಗೆ ಬಹುಮಾನ ವಿತರಿಸಲಾಯಿತು.

ಕಾರ್ಯಕ್ರಮದಲ್ಲಿ ತರಬೇತಿಯ ಪೊಲೀಸ್ ಮಹಾ ನಿರ್ದೇಶಕರಿಗೆ ಪ್ರೇಮ್ ಶಂಕರ್ ಹಾಗೂ ಪೊಲೀಸ್ ಮಹಾ ನಿರೀಕ್ಷಕರಾದ ಅಲೋಕ್ ಕುಮಾರ್ ಉಪಸ್ಥಿತರಿದ್ದರು.

ತರಬೇತಿಯ ನೇತೃತ್ವವಹಿಸಿದ್ದ ಪಿಡಿಎಂಎಸ್‌ನ ಪೊಲೀಸ್ ಅಧೀಕ್ಷಕರಾದ ಎಂ.ಜಿ. ಈಶ್ವರಪ್ಪ ಪ್ರಾಸ್ತಾವಿಕ ಭಾಷಣ ಮಾಡಿದರು.

ಎಸ್‌ಎಂ:ಕವನ:ಜಿಪಿಆರ್.

## ಸಚಿವರ ಪ್ರವಾಸ

ಬೆಂಗಳೂರು, ಅಕ್ಟೋಬರ್ 25 (ಕರ್ನಾಟಕ ವಾರ್ತೆ)

ಕಾರ್ಮಿಕ ಸಚಿವ ಹಾಗೂ ಬಳ್ಳಾರಿ ಜಿಲ್ಲಾ ಉಸ್ತುವಾರಿ ಸಚಿವರೂ ಆದ ಸಂತೋಷ್ ಎಸ್. ಲಾಡ್ ಅವರು ಅಕ್ಟೋಬರ್ 26 ಮತ್ತು 27 ರಂದು ಪ್ರವಾಸ ಕೈಗೊಳ್ಳಲಿದ್ದಾರೆ. ಹಂಪಿ ಉತ್ಸವಕ್ಕೆ ಸಂಬಂಧಿಸಿದಂತೆ ಪೂರ್ವತಯಾರಿ ಸಭೆಯಲ್ಲಿ ಪಾಲ್ಗೊಂಡು, ಸ್ಥಳ ಪರಿವೀಕ್ಷಣೆ ನಡೆಸಲಿರುವ ಸಚಿವರು ಅಕ್ಟೋಬರ್ 27 ರಂದೇ ನಗರಕ್ಕೆ ಹಿಂದಿರುಗಲಿದ್ದಾರೆ.

ಎಸ್‌ಎಂ:ಜಿಪಿಆರ್.

## ಸಾರ್ವಜನಿಕರ ಗಮನಕ್ಕೆ

ಬೆಂಗಳೂರು, ಅಕ್ಟೋಬರ್ 25 (ಕರ್ನಾಟಕ ವಾರ್ತೆ)

ಸಾರ್ವಜನಿಕರಿಂದ ಅಧಿಕ ಬಡ್ಡಿ ವಸೂಲಾತಿ ಮಾಡಿದಲ್ಲಿ ಕರ್ನಾಟಕ ಮಿತಿಮೀರಿದ ಬಡ್ಡಿ ವಿಧಿಸುವಿಕೆಯ ನಿಷೇಧ ಅಧಿನಿಯಮ 2004 ರ ಪ್ರಕರಣ 4 ರಡಿ ಮೂರು

ವರ್ಷಗಳ ಜೈಲು ಶಿಕ್ಷೆ ಮತ್ತು ಮೂವತ್ತು ಸಾವಿರ ರೂ. ಗಳ ಜುಲ್ಮಾನೆ ವಿಧಿಸಲಾಗುವುದು ಎಂದು ಸಹಕಾರ ಇಲಾಖೆ ಪ್ರಕಟಣೆಯಲ್ಲಿ ತಿಳಿಸಿದೆ.

ಭದ್ರತಾ ಸಾಲಕ್ಕೆ ವಾರ್ಷಿಕ ಶೇಕಡ 14 ಹಾಗೂ ಭದ್ರತಾ ರಹಿತ ಸಾಲಕ್ಕೆ ವಾರ್ಷಿಕ ಶೇಕಡ 16 ರಷ್ಟು ಮಾತ್ರ ಬಡ್ಡಿ ವಿಧಿಸಲು ಅವಕಾಶವಿರುತ್ತದೆ. ಈ ದರಕ್ಕಿಂತ ಹೆಚ್ಚಿನ ಬಡ್ಡಿ ದರ ವಿಧಿಸುವುದು ಅಪರಾಧ. ಕಾಯ್ದೆಯ ಅವಕಾಶಗಳನ್ನು ಉಲ್ಲಂಘಿಸಿ ಅಧಿಕ ಬಡ್ಡಿ ವಸೂಲಾತಿ ಮಾಡಿದ ಅಥವಾ ಅನಧಿಕೃತವಾಗಿ ಲೇವಾದೇವಿ ವ್ಯವಹಾರ ಮಾಡುವುದು ಕಂಡುಬಂದಲ್ಲಿ ದೂರು ದಾಖಲಿಸಲು ಆಯಾ ಜಿಲ್ಲೆಗಳ ಜಿಲ್ಲಾಧಿಕಾರಿಗಳು, ಪೊಲೀಸ್ ವರಿಷ್ಠಾಧಿಕಾರಿಗಳು ಅಥವಾ ಸಹಕಾರ ಸಂಘಗಳ ನಿಬಂಧಕರು, ನಂ. 1, ಆಲಿ ಆಸ್ಕರ್ ರಸ್ತೆ, ಬೆಂಗಳೂರು – 52, ದೂರವಾಣಿ ಸಂಖ್ಯೆ 080 – 2229636 ಸಂಪರ್ಕಿಸಬಹುದು

ಲೇವಾದೇವಿ, ಹಣಕಾಸು ಸಂಸ್ಥೆಗಳು ಮತ್ತು ಗಿರವಿದಾರರು ಬಡ್ಡಿದರವನ್ನು ಬಿಂಬಿಸುವ 2*1 ಅಡಿ ಬೋರ್ಡ್‌ನ್ನು ಕಡ್ಡಾಯವಾಗಿ ಪ್ರದರ್ಶಿಸಬೇಕು. ಲೇವಾದೇವಿ, ಹಣಕಾಸು ಸಂಸ್ಥೆಗಳು ಚೀಟಿ ವ್ಯವಹಾರ ನಡೆಸಲು ಚೀಟಿ ನಿಬಂಧಕರಿಂದ ಅನುಮತಿ ಪಡೆದಿರಬೇಕು.

ಹೆಚ್ಚಿನ ಮಾಹಿತಿಗಾಗಿ ಸಹಕಾರ ಇಲಾಖೆಯ ಸಹಕಾರ ಸಿಂಧು ಜಾಲತಾಣ www.sahakara.kar.gov.in. ಭೇಟಿ ನೀಡಬಹುದಾಗಿದೆ.

ಎಸ್‌ಎಂ:ಜಿಪಿಆರ್.

## ರೈತರ ಆದಾಯ ದ್ವಿಗುಣಗೊಳ್ಳಲು 10 ಸೂತ್ರಗಳು – ಕೃಷಿ ಸಚಿವ ಕೃಷ್ಣ ಬೈರೇಗೌಡ

ಬೆಂಗಳೂರು, ಅಕ್ಟೋಬರ್ 25 (ಕರ್ನಾಟಕ ವಾರ್ತೆ)

ಭಾರತದ ಒಟ್ಟು ಜನಸಂಖ್ಯೆಯ ಅರ್ದಕ್ಕಿಂತ ಹೆಚ್ಚು ಜನರ ಕಸುಬು ಆಗಿರುವ ಕೃಷಿಯಿಂದ ದೇಶದ ಒಟ್ಟು ಜಿಡಿಪಿಗೆ ಕೊಡುಗೆ ಕೇವಲ ಶೇಕಡ 14% ಆಗಿರುವುದು ನಾವು ಕೃಷಿಗೆ ನೀಡಿರುವ ಸ್ಥಾನವನ್ನು ತೋರಿಸುತ್ತದೆ, ಇದು ನಮ್ಮ ದೇಶದ ದುರಂತ, ಕೃಷಿ ಪ್ರಧಾನ ದೇಶದಲ್ಲಿ ಕೃಷಿ ಮತ್ತು ರೈತ ಮೂಲೆ ಗುಂಪಾಗಿರುವುದೆ ಇದಕ್ಕೆಲ್ಲಾ ಕಾರಣ ಎಂದು ಕೃಷಿ ಸಚಿವ ಕೃಷ್ಣ ಬೈರೇಗೌಡ ಹೇಳಿದರು.

ನಬಾರ್ಡ್, ಕರ್ನಾಟಕ ಸರಕಾರ ಹಾಗೂ ಕೇಂದ್ರ ಸರಕಾರದ ಸಹಯೋಗದಲ್ಲಿ ಇಂದು ನಗರದ ನಬಾರ್ಡ್ ಕೇಂದ್ರ ಕಚೇರಿಯಲ್ಲಿ ಹಮ್ಮಿಕೊಂಡಿದ್ದ ರೈತರ ಆದಾಯ ದ್ವಿಗುಣ ಮಾಡುವುದು ಹೇಗೆ ಎಂಬ ಒಂದು ದಿನದ ದಕ್ಷಿಣ ರಾಜ್ಯಗಳ ಪ್ರಾದೇಶಿಕ ಕಾರ್ಯಗಾರವನ್ನು ಉದ್ಘಾಟಿಸಿ ಅವರು ಮಾತನಾಡಿದರು. 2003 ರಲ್ಲಿ ರಾಷ್ಟ್ರೀಯ ಸ್ಯಾಂಪಲ್ ಸರ್ವೆ ಆರ್ಗನೈಸೇಷನ್ ನಡೆಸಿದ ಸರ್ವೆಯಲ್ಲಿ ಭಾರತದಲ್ಲಿ ಪ್ರತಿ ಕುಟುಂಬದ ಆದಾಯ ರೂ 2100 ರಷ್ಟಿತ್ತು ಅದೇ 2013ರ ಸರ್ವೆಯಲ್ಲಿ ಅದು ರೂ. 6,426ಕ್ಕೇ ಏರುವ ಮೂಲಕ 10 ವರ್ಷಗಳಲ್ಲಿ ಶೇಕಡ 300ಕ್ಕಿಂತ ಹೆಚ್ಚು ಅಭಿವೃದ್ಧಿಯಾಗಿದೆ ಎಂದು ಭಿಗಿದೆವು, ಆದರೆ

ರೈತರ ವಿಷಯದಲ್ಲಿ ಈ ಅಭಿವೃದ್ಧಿ ಕಾಣಲಿಲ್ಲ. ಮಧ್ಯಮ ವರ್ಗದ ಹಿತ ಕಾಯಲಿಕ್ಕಾಗಿ ಕೃಷಿ ಮಾರುಕಟ್ಟೆ ದರ ನಿರ್ಧರಿಸುವ ಎಮ್‌ಎಸ್‌ಪಿ ವರ್ಷಕ್ಕೆ ಕೇವಲ ಶೇಕಡ 15ರಷ್ಟನ್ನು ಹೆಚ್ಚಿಸುವ ಮೂಲಕ ರೈತರಿಗೆ ಅನ್ಯಾಯ ಮಾಡುತ್ತಿದೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

ಈ ಕಾರ್ಯಗಾರದ ಉದ್ಧೇಶವನ್ನು ಮತ್ತಷ್ಟು ಬಲಿಷ್ಠ ಪಡಿಸಲು ಸಚಿವರು ತಮ್ಮದೇ ಆದ 10 ಸೂತ್ರಗಳನ್ನು ಸಭೆಯಲ್ಲಿ ಮಂಡಿಸಿ ಅವುಗಳ ಬಗ್ಗೆ ಸಹ ಗಮನ ಹರಿಸಿದಲ್ಲಿ ರೈತರ ಆದಾಯ ದ್ವಿಗುಣಗೊಳಿಸುವುದು ಹೇಗೆ ಎಂಬ ಪ್ರಶ್ನೆಗೆ ಉತ್ತರಗಳನ್ನು ಕಂಡುಕೊಳ್ಳಬಹುದು ಎಂದು ಹೇಳಿದರು.

**ಉತ್ಪಾದನೆಯಲ್ಲಿ ಹೆಚ್ಚಳ:** ಕೃಷಿಯಲ್ಲಿ ಹೊಸ ವಿಧಾನಗಳನ್ನು ಅಳವಡಿಸಿಕೊಳ್ಳುವುದರ ಮೂಲಕ ಉತ್ಪಾದನೆಯಲ್ಲಿ ಹೆಚ್ಚಳ ಮಾಡಿದಲ್ಲಿ ಆದಾಯದಲ್ಲಿ ಬೆಳವಣಿಗೆಯನ್ನು ಕಾಣಬಹುದು.

**ಬೆಳೆಗೆ ತಕ್ಕ ಬೆಲೆ:** ಬೆಳೆದ ಬೆಳೆಗೆ ತಕ್ಕ ಬೆಲೆ ಸಿಗುವಂತೆ ಮಾಡಲು ಬೇಕಾದ ಅಂಶಗಳ ಬಗ್ಗೆ ಗಮನ ಹರಿಸಿಬೇಕು.

**ಭೂಮಿ ಇಭ್ಭಾಗ ತಡೆಯಬೇಕು:** ತಾತನ ತಲೆಮಾರಿನಲ್ಲಿ ಇದ್ದ 10 ಎಕ್ಕರೆ ಭೂಮಿ ಮೊಮ್ಮಕ್ಕಳ ಕಾಲಕ್ಕೆ ಹಂಚಿಕೆಯಾಗುತ್ತಾ ಬಂದು ಕೊನೆಗೆ ತಲಾ ಒಂದು ಎಕ್ಕರೆ ಭೂಮಿಯಲ್ಲಿ ಸಾಗುವಳಿ ಮಾಡುವುದರಿಂದ ಲಾಭ ಪಡೆಯುವುದು ಅಸಾಧ್ಯ.

**ನೀರು ಮತ್ತು ನೀರಿನ ಬಳಕೆ:** ಇರುವ ನೀರನ್ನು ಹೇಗೆ ಸದ್ಬಳಕೆ ಮಾಡಿಕೊಳ್ಳಬೇಕು ಮತ್ತು ಅದರಿಂದ ಹೆಚ್ಚಿನ ಭೂಮಿಯನ್ನು ಹೇಗೆ ನೀರಾವರಿ ಮಾಡಬಹುದು ಎನ್ನುವುದರ ಬಗ್ಗೆ ಚರ್ಚೆ ನಡೆಯಬೇಕು.

**ಆರ್ಥಿಕತೆ:** ರೈತರ ಬದುಕಿನಲ್ಲಿ ಸಾಲ ಎನ್ನುವುದು ಬಹುಮುಖ್ಯ ಪಾತ್ರವಹಿಸುತ್ತದೆ, ಅದಕ್ಕಾಗಿ ಸಾಲ ನೀಡುವ ಮತ್ತು ಪಡೆಯುವ ಕಾರಣಗಳ ಬಗ್ಗೆ ಸಾಲ ನೀಡುವ ಸಂಸ್ಥೆಗಳು ಅದರ ಬಳಕೆಯ ಬಗ್ಗೆ ನಿಗಾವಹಿಸಬೇಕು. ಸಾಲ ಪಡೆಯುವ ಕ್ರಮಗಳನ್ನು ಸರಳೀಕರಿಸಬೇಕು.

**ಬಂಡವಾಳ:** ಕೃಷಿ ಬಂಡವಾಳವನ್ನು ತಗ್ಗಿಸುವ ಕ್ರಮಗಳ ಬಗ್ಗೆ ಯೋಚಿಸಬೇಕು, ಮಷಿನರಿಗಳಿಂದ ಶೇಕಡ 40ರಷ್ಟು ಬಂಡವಾಳ ಉಳಿಸಬಹುದು ಎನ್ನುವುದಾದರೆ ಉಳಿದ ವಿಭಾಗಗಳ ಬಗ್ಗೆ ಚಿಂತನೆ ನೆಡೆಸಬೇಕು.

**ಮಳೆಯಾಧರಿತ ಕೃಷಿ:** ಕೃಷಿಯೆಂದರೆ ಕೇವಲ ನೀರಾವರಿ ಅಲ್ಲ, ನಮ್ಮ ದೇಶದಲ್ಲಿ ಅರ್ದಕ್ಕಿಂತ ಹೆಚ್ಚು ಭೂಮಿ ಇನ್ನೂ ಮಳೆ ಆಧಾರಿತ ಆಗಿರುವುದರಿಂದ ಮಳೆ ಆಧರಿಸಿ ಬೆಳೆಯುವ ಬೇಸಾಯದಲ್ಲಿನ ಬದಲಾವಣೆಗಳ ಬಗ್ಗೆ ಸಂಶೋಧನೆಗಳು ನಡೆಯಲಿ.

**ಉತ್ತಮ ಮಾರುಕಟ್ಟೆ ವ್ಯವಸ್ಥೆ:** ಈಗಾಗಲೇ ಕರ್ನಾಟಕದಲ್ಲಿ ಕೃಷಿ ಇಲಾಖೆ ಪರಿಚಯಿಸಿರುವ ಆನ್‌ಲೈನ್ ಮಾರುಕಟ್ಟೆ ಉತ್ತಮವಾಗಿದ್ದು ಮುಂದಿನ ದಿನಗಳಲ್ಲಿ ಚಿಕ್ಕ ಮಾರಾಟಗಾರರಿಗೆ ಅನುಕೂಲವಾಗುವಂತೆ ರೀಟೈಲ್ ಮಾರುಕಟ್ಟೆ, ಶೇಖರಣಾ ಉಗ್ರಾಣ ಮತ್ತು ಚಿಕ್ಕ ರೈತರನ್ನು ಬೆಸೆಯುವ ಕಾರ್ಯಗಳಾಗಬೇಕು.

**ಉಪಕಸುಬು:** ಪ್ರತಿಯೊಬ್ಬ ರೈತ ತನ್ನ ಕೃಷಿ ಜೊತೆಗೆ ಕೃಷಿ ಆಧಾರಿತ ಉಪ ಕಸುಬುಗಳು, ಜಾನುವಾರು ಸಾಕಣೆ ಸೇರಿದಂತೆ ಇತರೆ ಆದಾಯ ಮೂಲಗಳನ್ನು ಬೆಳೆಸಿಕೊಳ್ಳಬೇಕು ಎಂದು ತಮ್ಮ ಹತ್ತು ಸಲಹೆಗಳನ್ನು ನೀಡಿದರು.

ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾದ ಜನರಲ್ ಮ್ಯಾನೇಜರ್ ಎನ್. ಗೋಪಾಲ್ ಅವರು ಮುಖ್ಯ ಅತಿಥಿಗಳಾಗಿ ಮಾತನಾಡಿ ಅನ್ನ ನೀಡುವ ರೈತನಿಗೆ ಕೃತಜ್ಞತೆ ಸಲ್ಲಿಸುವುದಕ್ಕೆ ಇದೊಂದು ಸುವರ್ಣ ಅವಕಾಶವಾಗಿದೆ, ರೈತರ ಆದಾಯ ದ್ವಿಗುಣ ಮಾಡುವ ಬಗ್ಗೆ ಈ ಚಿಂತನ-ಮಂಥನ ನಡೆಯುವ ಅವಶ್ಯಕತೆ ಇತ್ತೀಚಿಗೆ ತುಂಬಾ ಇದ್ದು, ಅವರ ಆದಾಯ ಹೆಚ್ಚಿಸಬೇಕಾಗಿದೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ದಕ್ಷಿಣ ಭಾರತದ ಎಲ್ಲಾ ರಾಜ್ಯಗಳ ಅಧಿಕಾರಿಗಳು, ಬ್ಯಾಂಕುಗಳ ಉನ್ನತ ಅಧಿಕಾರಿಗಳು ಮತ್ತು ಕೃಷಿತಜ್ಞರು ಭಾಗವಹಿಸಿದ್ದರು.

## ಆಯ್ಕೆ ಪಟ್ಟಿ ಪ್ರಕಟ

ಬೆಂಗಳೂರು, ಅಕ್ಟೋಬರ್ 25 (ಕರ್ನಾಟಕ ವಾರ್ತೆ)

ಕರ್ನಾಟಕ ಲೋಕಸೇವಾ ಆಯೋಗವು ದಿನಾಂಕ: 30-6-2015ರ ಅಧಿಸೂಚನೆಯಲ್ಲಿ ಅಧಿಸೂಚಿಸಲಾಗಿದ್ದ ಕರ್ನಾಟಕ ವಿವಿಧ ಇಲಾಖೆಗಳಲ್ಲಿನ 2226 ಕಿರಿಯ ಸಹಾಯಕರು/ದ್ವಿತೀಯ ದರ್ಜೆ ಸಹಾಯಕರ ಹುದ್ದೆಗಳ ಅಂತಿಮ ಆಯ್ಕೆ ಪಟ್ಟಿಯನ್ನು ದಿನಾಂಕ 24-10-2016 ರಂದು ಆಯೋಗದ ಅಂತರ್ಜಾಲ http//kpsc.kar.nic.in ದಲ್ಲಿ ಅಭ್ಯರ್ಥಿಗಳ ಮಾಹಿತಿಗಾಗಿ ಪ್ರಕಟಿಸಲಾಗಿದೆ.

## ಸಂದರ್ಶನ

ಬೆಂಗಳೂರು, ಅಕ್ಟೋಬರ್ 25 (ಕರ್ನಾಟಕ ವಾರ್ತೆ)

ಕರ್ನಾಟಕ ಲೋಕಸೇವಾ ಆಯೋಗವು ದಿನಾಂಕ: 4-02-2016 ರ ಅಧಿಸೂಚನೆಯಲ್ಲಿ ಅಧಿಸೂಚಿಸಿರುವ ಸಾರಿಗೆ ಇಲಾಖೆಯಲ್ಲಿನ ಪ್ರಾದೇಶಿಕ ಸಾರಿಗೆ ಅಧಿಕಾರಿಗಳ 09+02 ಈ(ಹೈಕ) ಹುದ್ದೆಗಳ ನೇಮಕಾತಿಗಾಗಿ ಸಂದರ್ಶನವನ್ನು ದಿನಾಂಕ 10-11-2016 ರಂದು ಬೆಳಿಗ್ಗೆ 10.00 ಗಂಟೆಗೆ ಆಯೋಗದ ಕೇಂದ್ರ ಕಚೇರಿ, ಬೆಂಗಳೂರು ಇಲ್ಲಿ ನಡೆಸಲಿದೆ.

ಅರ್ಹ ಅಭ್ಯರ್ಥಿಗಳ ಸಂದರ್ಶನಾ ಸೂಚನಾ ಪತ್ರಗಳನ್ನು ಈಗಾಗಲೇ ಕಳುಹಿಸಲಾಗಿದೆ. ಸಂದರ್ಶನಕ್ಕೆ ಅರ್ಹರಾದ ಅಭ್ಯರ್ಥಿಗಳ ಪಟ್ಟಿಗಳನ್ನು ಮಾಹಿತಿಗಾಗಿ ಆಯೋಗದ ವೆಬ್‌ಸೈಟ್ http//kpsc.kar.nic.in/Eligibility List ದಲ್ಲಿ ಪ್ರಕಟಿಸಲಾಗಿದೆ.

## ಆಯ್ಕೆ ಪಟ್ಟಿ ಪ್ರಕಟ

ಬೆಂಗಳೂರು, ಅಕ್ಟೋಬರ್ 25 (ಕರ್ನಾಟಕ ವಾರ್ತೆ)

ಕರ್ನಾಟಕ ಲೋಕಸೇವಾ ಆಯೋಗದ ಅಧಿಸೂಚನೆ ದಿನಾಂಕ: 25-9-2014ರಲ್ಲಿ ಅಧಿಸೂಚಿಸಿರುವ ಅಲ್ಪಸಂಖ್ಯಾತರ ಕಲ್ಯಾಣ ನಿರ್ದೇಶನಾಲಯದ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳಲ್ಲಿನ ಪ್ರಾಂಶುಪಾಲರು ಮತ್ತು ಕಂಪ್ಯೂಟರ್ ಶಿಕ್ಷಕರು ಹುದ್ದೆಗಳಿಗೆ ಸಂಬಂಧಿಸಿದಂತೆ ನ್ಯಾಯಾಲಯದ ಆದೇಶದ ಮೇರೆಗೆ ಕಾಯ್ದಿರಿಸಲಾದ ಹುದ್ದೆಗಳಿಗೆ ಆಯ್ಕೆಪಟ್ಟಿಗಳ ಹಾಗೂ ಅಧಿಸೂಚನೆ ದಿನಾಂಕ 21-11-2015 ರಲ್ಲಿ ಅಧಿಸೂಚಿಸಿರುವ ಕರ್ನಾಟಕ ಆಹಾರ ಮತ್ತು ನಾಗರಿಕ ಸರಬರಾಜು ನಿಗಮ ನಿಯಮಿತದಲ್ಲಿನ ಸಹಾಯಕ ವ್ಯವಸ್ಥಾಪಕರು(11 ಹುದ್ದೆಗಳು)ಗುಣಮಟ್ಟ ಪರಿವೀಕ್ಷಕರು (30 ಹುದ್ದೆಗಳು) ಮತ್ತು ಹಿರಿಯ ಸಹಾಯಕರು (ಲೆಕ್ಕಪತ್ರ) (35 ಹುದ್ದೆಗಳು) ಹುದ್ದೆಗಳ ತಾತ್ಕಾಲಿಕ ಆಯ್ಕೆಪಟ್ಟಿಯನ್ನು ದಿ:24-10-2016 ರಂದು ಆಯೋಗದ ವೆಬ್‌ಸೈಟ್ http//kpsc.kar.nic.in./Selection List ದಲ್ಲಿ ಅಭ್ಯರ್ಥಿಗಳ ಮಾಹಿತಿಗಾಗಿ ಪ್ರಕಟಿಸಲಾಗಿದೆ.

ಕರ್ನಾಟಕ ಆಹಾರ ಮತ್ತು ನಾಗರಿಕ ಸರಬರಾಜು ನಿಗಮ ನಿಯಮಿತದಲ್ಲಿನ ತಾತ್ಕಾಲಿಕ ಆಯ್ಕೆಪಟ್ಟಿಗಳಿಗೆ ಆಕ್ಷೇಪಣೆಗಳನ್ನು ಸಲ್ಲಿಸಲು ಇಚ್ಛಿಸುವ ಅಭ್ಯರ್ಥಿಗಳು ದಿನಾಂಕ: 02-11-2016ರೊಳಗೆ ಕಾರ್ಯದರ್ಶಿ, ಕರ್ನಾಟಕ ಲೋಕ ಸೇವಾ ಆಯೋಗ, ಉದ್ಯೋಗ ಸೌಧ, ಬೆಂಗಳೂರು-560 001 ಇವರಿಗೆ ಸಲ್ಲಿಸಬಹುದು. ನಿಗದಿತ ದಿನಾಂಕದ ನಂತರ ಸ್ವೀಕೃತವಾಗುವ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.